ಓ ಎಸ್ ನಂ. **37/2021**

ಪಿ.ಡಬ್ಲ್ಯೂಃ 1

ದಿನಾಂಕಃ **13-01-2023** ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು : ಪ್ರತಿವಾದಿಯ ಪರ ವಕೀಲರಿಂದಃ-

ನನ್ನ ತಾತ ಫಕೀರಗೌಡರಿಗೆ 2 ಜನ ಗಂಡು ಮಕ್ಕಳು 3 ಜನ ಹೆಣ್ಣುಮಕ್ಕಳು ಅವರೆಂದರೆ ನಾಗಮ್ಮ, ಸುಂದ್ರಮ್ಮ, ಹನುಮವ್ವ, ಹನುಮಂತಪ್ಪ ಮತ್ತು ನನ್ನ ತಂದೆ ಸಕ್ರಪ್ಪ ನನ್ನ ತಂದೆ ತೀರಿಕೊಂಡು ಸುಮಾರು 21 ವರ್ಷಗಳು ಕಳೆದಿವೆ. ಹನುಮಂತಪ್ಪರವರು ಈ ದಾವೆ ಸಲ್ಲಿಸಿದ ನಂತರ ಮರಣ ಹೊಂದಿದ್ದಾರೆ. ನಮ್ಮ ಕುಟುಂಬದ ವಂಶವೃಕ್ಷವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಮೇಲೆ ಹೇಳಿದ 3 ಜನ ಹೆಣ್ಣು ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲವೆಂದರೆ ಸಾಕಿ ಅವರು ಮರಣಹೊಂದಿದ್ದಾರೆಂದು ಹೇಳುತ್ತಾರೆ. ಅವರುಗಳ ವಂಶಸ್ಥರು ಜೀವಂತ ಇದ್ದಾರೆ, ಅವರುಗಳನ್ನು ಪಕ್ಷಕಾರರನ್ನಾಗಿ ಮಾಡಿಲ್ಲ. ನಿಮ್ಮ ತಂದೆ ವಿಭಾಗಕ್ಕಾಗಿ ಎಂದೂ ಕೇಳಿಲ್ಲ ಮತ್ತು ದಾವೆ ಸಲ್ಲಿಸಿಲ್ಲವೆಂದರೆ ಸಾಕ್ಷಿಯು ನನ್ನ ತಂದೆ ಮತ್ತು ನಾನು ಅವಿದ್ಯಾವಂತರು ನಮಗೆ ಗೊತ್ತಿರಲಿಲ್ಲ, ನಮ್ಮ ತಂದೆ ತಾಯಿ ಮರಣಾ ನಂತರ ಪಹಣಿಗಳನ್ನು ನೋಡಿದ ಮೇಲೆ ಅವರು ಹೆಚ್ಚಿನ ಸ್ವತ್ತು ತೆಗೆದುಕೊಂಡು ನಮಗೆ 7 ಎಕರೆ ನೀಡಿದ್ದಾರೆಂದು ಸಾಕ್ಷಿ ಹೇಳುತ್ತಾರೆ. ದಿಃ05-05-1988 ರಂದು ನನ್ನ ತಂದೆ ಮತ್ತು ದೊಡ್ಡಪ್ಪ ಹನುಮಂತಪ್ಪರವರು ಸ್ವತ್ತುಗಳನ್ನು ವಿಭಾಗಿಸಿಕೊಂಡಿದ್ದರೆಂದರೆ ಸರಿಯಲ್ಲ. ಸದರಿ ವಿಭಾಗದ ಪ್ರಕಾರ ಅವರುಗಳ ಹೆಸರಿಗೆ ಪ್ರತ್ಯೇಕ ಖಾತೆಗಳಾಗಿವೆ ಎಂದರೆ ಸಾಕ್ಷಿ ಎಂ ಆರ್ ದಾಖಲೆಗಳನ್ನು ತಿದ್ದಲಾಗಿದೆ ಎಂದು ಹೇಳುತ್ತಾರೆ. ಸದರಿ ಎಂ ಆರ್ ಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ವಾದಪತ್ರದಲ್ಲಿ ಹಾಗೂ ಪ್ರಮಾಣಪತ್ರದಲ್ಲಿ ನನ್ನ ತಂದೆಗೆ ಮತ್ತು ದೊಡ್ಡಪ್ಪ ಹನುಮತಂಪ್ಪರವರಿಗೆ ಏನೇನು ಸ್ವತ್ತುಗಳು ಬಂದಿವೆ ಎಂಬುದನ್ನು ತಿಳಿಸಿದ್ದೇನೆ. ನನ್ನ ತಂದೆ ಮತ್ತು ದೊಡ್ಡಪ್ಪನವರ ಹೆಸರಿಗೆ ದಾಖಲಾಗಿರುವ ಎಂ ಆರ್ ಗಳನ್ನು ಮೇಲ್ಮನವಿ ಸಲ್ಲಿಸಿ ಪ್ರಶ್ನಿಸಿಲ್ಲ. ನನ್ನ ದೊಡ್ಡಪ್ಪ ಮನೆಯೊಂದನ್ನು ತಮ್ಮ ಹೆಸರಿಗೆ ಮಾಡಿಕೊಂಡು ನಮ್ಮನ್ನು ಖಾಲಿ ಮಾಡಲು ಒತ್ತಾಯಿಸುತ್ತಿದ್ದಾರೆ. ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪ್ರತಿವಾದಿಯ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೇಳಿದರು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಇದೆ.

**ಹಿರಿಯ ಸಿವಿಲ್ ನ್ಯಾಯಾಧೀಶರು,**

**ಹೂವಿನ ಹಡಗಲಿ.**